ಮಾತಾಡುತ್ತಿದ್ದೆ. ಉಣ್ಣುವುದನ್ನು ತಿನ್ನುವುದನ್ನು ಮರೆತು ಮಾತಾಡುತ್ತಿದ್ದೆ. ನನ್ನ ಅನುಭವಗಳನ್ನು ನಾನು ಕಂಡ ಸತ್ಯಗಳನ್ನು, ನಿಮ್ಮ ಮುಂದಿನ ಬದುಕು ಹೇಗಿರಬೇಕು ಎಂಬ ವಿಚಾರಗಳನ್ನು ಹೇಳುತ್ತಿದ್ದೆ. ಸರಳವಾಗಿ ಹೇಳಬೇಕೆಂದರೆ, ನಾನು ನಿರಂತರ ಮಾತಾಡುವ ಮನುಷ್ಯನಾಗಿದ್ದೆ' ಎಂದು ನರಹರಿ ಮುಗುಳ್ನಕ್ಕ. ಎಷ್ಟೋ ಕಾಲದ ನಂತರ ಅವನ ಅಂತರಾಳದಿಂದ ಹೊರಬಂದ ನಗುವಾಗಿತ್ತದು. ಸುಕೃತಿ ಬಹಳ ಚಿಕ್ಕವಳಿದ್ದಳು. ಅವಳಿಗೆ ಏನೂ ಅರ್ಥವಾಗುತ್ತಿರಲಿಲ್ಲ.

ನರಹರಿಗೆ ತನ್ನ ಹೃದಯದಲ್ಲಿ ಯಾಕೆ ದುಃಖದ ಕೆಂಡ ಉಂಟಾಗಿತ್ತು ಎನ್ನುವುದನ್ನು ಅಭಿಗೆ ಹೇಳಬೇಕಾಗಿತ್ತು. ಮಂತ್ರಾಲಯದಿಂದ ಬರುವಾಗ ಹೇಗೆ ತನ್ನ ತಪ್ಪಿನಿಂದಾಗಿ ಸಂಭವಿಸಿದ ಅಪಘಾತದಲ್ಲಿ ತಾಯಿ ತಂದೆಯನ್ನು ಕಳೆದುಕೊಂಡೆ ಎಂದು ತಿಳಿಸಿದ.

'ಆ ಕಾರಣದಿಂದ ಸೃಷ್ಟಿಯಾದ ದುಃಖದ ಬೆಂಕಿಯ ಕಾರಣದಿಂದ ಮಾತಾಡಲಾರದ ಮನುಷ್ಯನಾದುದು ಮಾತ್ರವಲ್ಲ. ನಾನು ಏನಾದೆ ಎಂದೇ ನನಗೆ ಅರ್ಥವಾಗಲಿಲ್ಲ. ಜೀವಂತವಾಗಿರುವೆನೊ ಇಲ್ಲವೊ ಎಂದು ಕೂಡ ಅರ್ಥವಾಗುತ್ತಿರಲಿಲ್ಲ. ಯಾಕೆಂದರೆ, ಯಾವುದೂ ನೆನಪಿಗೆ ಬರುತ್ತಿರಲಿಲ್ಲ. ಶಾಲ್ಮಲಿ, ನೀನು, ಸುಕೃತಿ ಯಾರೂ ನೆನಪಿಗೆ ಬರುತ್ತಿರಲಿಲ್ಲ. ಬಹಳ ಕಾಲ ನಾನು ಯಾರು ಎಂದೇ ನನಗೆ ತಿಳಿಯಲಿಲ್ಲ. ಒಂದು ವರ್ಷಕ್ಕೂ ಮೀರಿದ ಕಾಲ ನಡೆದಾಡುವ ಯಂತ್ರದಂತೆ ಇದ್ದೆ. ಅತಿ ಸಂವೇದನೆಯ ಮನುಷ್ಯನಾಗಿದ್ದ ನಾನು ನಗು ಮತ್ತು ಕಣ್ಣೀರು ಇಲ್ಲದ, ದುಃಖ ಮತ್ತು ಸಂತೋಷ ಎಂದರೆ ಏನೆಂದು ತಿಳಿಯದ ಕಷ್ಟ ಸುಖವನ್ನು ಅರ್ಥ ಮಾಡಿಕೊಳ್ಳದ ಮನುಷ್ಯನಾದೆ. ಬಹು ಮಟ್ಟಿಗೆ ಈಗಲೂ ಹಾಗೇ ಇದ್ದೇನೆ. ಒಂದಷ್ಟು ಕಾಲ ರುಚಿ ಅರುಚಿ ಸಿಹಿ ಕಹಿ ಸುವಾಸನೆ ದುರ್ವಾಸನೆ ಎಂಬ ವ್ಯತ್ಯಾಸ ತಿಳಿಯುತ್ತಿರಲಿಲ್ಲ. ಬಹುಶಃ ನನ್ನ ಮನಸಿಗೆ ಅದನ್ನು ತಿಳಿದುಕೊಳ್ಳುವ ಇಚ್ಛೆ ಇಲ್ಲವಾಗಿತ್ತು'.

ನರಹರಿ ಭಾವರಹಿತನಾಗಿ ಮಾತು ನಿಲ್ಲಿಸಿದಾಗ ಅಭಿ ಮುಖ ಮುಚ್ಚಿಕೊಂಡು ಅಳತೊಡಗಿದ. ನರಹರಿ ಮಗನನ್ನು ನೋಡುತ್ತಾ ಭಾವರಹಿತನಾಗಿ ನಿರ್ಲಿಪ್ತನಾಗಿ ಕುಳಿತಿದ್ದ.

'ನಾನು ಪ್ರೀತಿ ಎಂಬ ಭಾವವನ್ನು ಕೂಡ ಕಳೆದುಕೊಂಡಿದ್ದೆ ಅಭಿ. ನೀನು ನನ್ನನ್ನು ಅಪ್ಪಿಕೊಂಡಾಗ ಪ್ರೀತಿಯೆಂಬ ಭಾವ ನನ್ನಲ್ಲಿನ್ನೂ ಸತ್ತಿಲ್ಲವೆನಿಸಿತು' ಎಂದ ನರಹರಿ. ಅಭಿ ಇನ್ನೂ ದುಃಖಿಸುತ್ತಲೇ ಇದ್ದ. ನರಹರಿ ಸಂತೈಸುವ ಪ್ರಯತ್ನ ಮಾಡಲಿಲ್ಲ. ಕಾರಣ ಏನೇ ಆಗಿರಲಿ, ದುಃಖವೋ ಸಂತೋಷವೋ ಅಳು ಬಂದಾಗ ಮನುಷ್ಯ ಅಳಬೇಕು ಎಂದೆನಿಸಿತು ನರಹರಿಗೆ.

ಅಭಿಯ ವ್ಯಾಕುಲತೆಯನ್ನು ತಡೆಯಬೇಕೆಂದುಕೊಂಡು ತನ್ನ ಸುತ್ತಾಟದ ಕುರಿತಾಗಿ ಮಾತಾಡಿದ, 'ನಾನು ಇಷ್ಟು ಕಾಲವೂ ನಡೆಯುತ್ತಲೇ ಇದ್ದೆ ಅಭಿ. ಹೆಚ್ಚು ಕಾಲ ಎಲ್ಲಿಯೂ ಇರಲಿಲ್ಲ. ಯಾರ ಸ್ನೇಹವನ್ನೂ ಮಾಡಲಿಲ್ಲ. ಮನುಷ್ಯನ ಸ್ನೇಹ ಮಾಡುವುದಕ್ಕಿಂತ ಸಾಗರವೇ ಎಂಬಂತಿರುವ ಗಂಗಾನದಿಯ ದಡದಲ್ಲಿ ಕುಳಿತು ನೀರಿನ ಚಲನೆಯನ್ನು ನೋಡುತ್ತಾ ಕುಳಿತುಕೊಳ್ಳುವುದು ಆನಂದದಾಯಕ ಎಂದು ಅನಿಸಿತು. ಕಾಶ್ಮೀರ, ಅಮರನಾಥ, ಬೋದ್‌ಗಯಾ, ಲೋಟಸ್ ಟೆಂಪಲ್ ಇತ್ಯಾದಿಗಳನ್ನು ನೋಡಿದ ಬಳಿಕ ನಡೆದದ್ದು ಸಾಕು ಎಂದೆನಿಸಿ ಕಾಶಿಗೆ ಬಂದೆ. ಇಲ್ಲಿ ನೈಸರ್ಗಿಕವಾಗಿಯೇ ಸಾಯುವುದರಲ್ಲಿ ಆನಂದವಿದೆ ಎಂದೆನಿಸಿ ಇಲ್ಲಿಯೇ ಉಳಿದೆ. ಬದುಕಿಗೇನೂ ಅರ್ಥವಿಲ್ಲ, ಸಾಯುವುದು ಅರ್ಥಪೂರ್ಣವೆನಿಸುವುದಾದರೆ ಅದು ಇಲ್ಲಿಯೇ ಎಂದುಕೊಂಡೆ.

ಪುನಃ ನರಹರಿಯ ನೆನಪು ಅವನು ಆನೆಮಹಲ್ ತೊರೆದ ದಿನಗಳಿಗೆ ಮರಳಿತು. 'ಹೊಸ ಕೆಂಡ ಎಂದು ಹೇಳಿದೆನಲ್ಲಾ, ಅದು ಕೂಡ ನನ್ನ ತಪ್ಪಿನಿಂದಲೇ ಹುಟ್ಟಿಕೊಂಡಿತು' ಎಂದು ನರಹರಿ ಸನ್ಮತಿ ಮತ್ತು ಅಮರೇಶ ಬಂದು ಹೇಗೆ ಆನೆಮಹಲಿನಲ್ಲಿ ತಳವೂರಿದರು, ಅವರ ನಡೆನುಡಿ ಹೇಗಿತ್ತು ಎಂದು ವಿವರವಾಗಿ ಹೇಳಿ, 'ನಿನ್ನ ಅಮ್ಮನ ಮರಣದ ನಂತರ ನಾನು ಯಾರು, ಯಾಕೆ ಬದುಕಿದ್ದೇನೆ ಎಂಬೆಲ್ಲ ಯೋಚನೆಗಳು ಬಂದು, ಆತ್ಮಹತ್ಯೆ ಮಾಡುವ ಯೋಚನೆ ಬಂದರೂ ಮನವೊಪ್ಪಲಿಲ್ಲ. ಒಂದರ್ಥದಲ್ಲಿ ಕೆಸರಿನಲ್ಲಿ ಆನಂದದಿಂದ ಬಿದ್ದುಕೊಳ್ಳುವ ಹಂದಿಯಂತಾಗಿಬಿಟ್ಟಿದ್ದೆ' ಎಂದು ತುಸು ತಡೆದು, 'ನನ್ನ ದೌರ್ಬಲ್ಯವನ್ನು, ನನ್ನ ವಿಸ್ಮೃತಿಯನ್ನು, ಮಿದುಳಿಲ್ಲದವನಂತಾದ ನನ್ನ ಸ್ಥಿತಿಯನ್ನು ಸನ್ಮತಿ ಮತ್ತು ಅಮರೇಶ ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ಕೂಡ ನನ್ನ ಬೋಧೆಗೆ ಬರಲಿಲ್ಲ. ನಾನು ಮರ ಮೃಗ ಪಕ್ಷಿ ಅಥವಾ ಯಾವುದೋ ಸರೀಸೃಪದಂತಿದ್ದೆ. ಸಂವೇದನಾ ಶಕ್ತಿಯಿಲ್ಲದವನಂತಾಗಿದ್ದೆ. ಸಾವು ಹಿತಕರ ಎಂಬ ಭಾವನೆ ಮಾತ್ರ ಆಗಾಗ ಬರುತ್ತಿತ್ತು. 'ನನ್ನದು' ಎಂದು ನನಗೆ ಏನೂ ಕಾಣಿಸಲಿಲ್ಲ. ನಾನೇ ನನಗೆ ಕಾಣಿಸಲಿಲ್ಲ. ಆ ಭಾವನೆ ತುಂಬಾ ತೀವ್ರವಾಗಿ ಸಹನಾತೀತವಾದ ಕ್ಷಣ ನಾನು ಆನೆಮಹಲಿನಿಂದ ಹೊರಟುಬಿಟ್ಟೆ. ನನಗೆ ಮನೆ ದೇಶ ಜನ ಸಮೂಹ ಯಾವುದೂ ಕಾಣಿಸಲಿಲ್ಲ. ಯಾವುದೂ ಇಲ್ಲವೆಂದೇ ಅನಿಸಿತು. 'ಇಲ್ಲ' ವೆಂಬುದರ ಬಿಸಿಯಲ್ಲಿ ಮತ್ತು ತಂಪಿನಲ್ಲಿ ಹಜ್ಜೆಯಿಡುತ್ತಾ ಎಲ್ಲಿಗೆ ಹೋಗುತ್ತಿದ್ದೇನೆ ಎಂಬ ಅರಿವು ಇಲ್ಲದೆ ನಡೆದೆ. ನಾನು ಮೃಗವೋ, ಪಕ್ಷಿಯೋ, ಯಾವುದೋ ಸರೀಸೃಪವೋ ಆಗಿದ್ದೆ. ಮನುಷ್ಯ ಎಂದು ಅನಿಸಲಿಲ್ಲ ಸ್ಥಳ, ಜನ ಸಮೂಹ ನದಿ ಕ್ಷೇತ್ರ ಎಂದು ಗುರುತಿಸಲು ಕೆಲವು ದಿನಗಳೇ ಬೇಕಾದವು. ಹಾಗೆ ಗುರುತಿಸಿದ ನಂತರವೂ ಯಾವುದೂ ನನ್ನದು ಅಲ್ಲ ಎಂದು ಭ್ರಮಣವನ್ನು ಮುಂದರಿಸಿದೆ.'

ಅಪ್ಪನಿಗೆ ಮಾತಾಡಿ ಆಯಾಸವಾಗಿದೆ ಎಂದೆನಿಸಿತು ಅಭಿಗೆ. ಆದರೂ ಅಪ್ಪ ಮಾತು ನಿಲ್ಲಿಸುತ್ತಿಲ್ಲ, ನಿಲ್ಲಿಸಬೇಕು ಎಂದುಕೊಂಡು, 'ಅಪ್ಪಾ, ನಿಮ್ಮ ಒದ್ದೆ ಬಟ್ಟೆ ಕೂಡ ಆರಿದೆ. ನನಗೆ ಹಸಿವಾಗಿದೆ, ಎಲ್ಲಾದರೂ ಏನಾದರೂ ಆಹಾರ ಸಿಗಬಹುದು. ಬನ್ನಿ ಹೋಗೋಣ' ಎಂದ ಅಭಿ.

ಇಬ್ಬರೂ ಸ್ವಲ್ಪ ದೂರ ನಡೆದ ನಂತರ ಒಂದು ವಿಶಾಲವಾದ ಶಮಿ ಮರದಡಿಯಲ್ಲಿ ಒಬ್ಬ ಬುಟ್ಟಿಯಲ್ಲಿ ಸೇಬು ಮತ್ತು ಕಿತ್ತಳೆ ಹಣ್ಣುಗಳನ್ನು ಇರಿಸಿಕೊಂಡಿರುವುದು ಕಾಣಿಸಿತು. ಅವನಿಂದ ಹಣ್ಣುಗಳನ್ನು ಕೊಂಡುಕೊಂಡು ಸ್ವಲ್ಪ ದೂರ ಹೋಗಿ ನದಿಗೆ ಹತ್ತಿರವಾಗಿ ಒಂದು ಹಾಸುಗಲ್ಲಿನಲ್ಲಿ ಇಬ್ಬರೂ ಕುಳಿತರು. ಕಿತ್ತಳೆ ಸುಲಿಯುತ್ತಾ ಅಭಿ, 'ಏನೂ ಇಲ್ಲ, ಏನೂ ಬೇಡ

## ಇಲ್ಲಿಯವರೆಗೆ



ಸುಕೃತಿ–ಸನ್ಮತಿ ಹೊಡೆದಾಡಿಕೊಳ್ಳುತ್ತಿದ್ದುದನ್ನು ಕಂಡ ಅಭಿ ಓಡಿಬಂದು ಜಗಳ ಬಿಡಿಸುತ್ತಾನೆ. ಅಮರೇಶನ ಬಳಿ 'ಏನಿದೆಲ್ಲಾ?' ಎಂದು ನೀವು ಈ ಮನೆಯಿಂದ ಹೊರಡಿ; ಹೋಟೆಲ್‌ನಲ್ಲಿ ರೂಮ್ ಮಾಡಿಕೊಂಡಿರಿ ಎಂದಾಗ ಅಮರೇಶ, ಮಹಡಿ ಮೇಲೆ ಹೋಗಿ ಎರಡು ಕಾಗದ ಪತ್ರಗಳನ್ನು ತಂದು ತೋರಿಸುತ್ತಾನೆ. ಅದರಲ್ಲಿ ಮನೆಯ ದಾಖಲೆ ಅಮರೇಶನ ಹೆಸರಿಗೆ ಇರುವುದನ್ನು ಕಂಡು 'ಹಾಗಿದ್ದರೆ ನಾನೇ ಹೊರಡುತ್ತೇನೆ' ಎಂದು ಹೋಟೆಲ್ ರೂಮ್ ಮಾಡುವುದಾಗಿ ಹೇಳಿ ಮನೆ ಬಿಡುತ್ತಾನೆ. ಅಲ್ಲಿಂದ ತಂದೆ ನರಹರಿಯನ್ನು ಅರಸುತ್ತಾ ಕೇದಾರ, ಕಾಶಿ, ಅಮರನಾಥ.. ಹೀಗೆ ಎಲ್ಲಾದರೂ ಇರಬಹುದು ಎಂದುಕೊಂಡು ಕೇದಾರಕ್ಕೆ ಬರುತ್ತಾನೆ. ಅಲ್ಲಿರುವ ಸಾಧು ಸನ್ಯಾಸಿಗಳಲ್ಲಿ ತಂದೆ ಯಾರೆಂದು ಗುರುತಿಸುವುದು ಕಷ್ಟ ಎಂದು ತನ್ನ ಟೀಶರ್ಟ್ ಮೇಲೆ 'ಐ ಆ್ಯಮ್ ಅಭಿ' ಎಂದು ಪೈಂಟ್‌ನಲ್ಲಿ ಬರೆಸಿ ಅಲೆದಾಡುತ್ತಾನೆ. ಅಲ್ಲೊಬ್ಬ ಸಂತನ ಜತೆಗೆ ಅಭಿ ತನ್ನ ಜೀವನ ವೃತ್ತಾಂತವನ್ನೆಲ್ಲ ಹಂಚಿಕೊಳ್ಳುತ್ತಾನೆ.